O.S. NO. 83/2012
DW – 2 .
Dated 13–07–2026.

ಸಾಕ್ಷಿಯನ್ನು ಈ ದಿನ ದಿನಾಂಕ 13–07–2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 5 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ಎಮ್ ಎಸ್ ವಕೀಲರಿಂದಃ

5 ನೇ ಪ್ರತಿವಾದಿ ನನಗೆ ಒಬ್ಬನೇ ಗಂಡು ಮಗ ಎಂದರೆ ನಿಜ. 5 ನೇ ಪ್ರತಿವಾದಿ 1996 ನೇ ಇಸ್ವಿಯಲ್ಲಿ ಡಿ ಪಾರ್ಮಸಿ ಕಲಿಯಲು ಬೆಳಗಾವಿಗೆ ಹೊದನು ಎಂದರೆ ನಿಜ. 5 ನೇ ಪ್ರತಿವಾದಿ ಬೆಳಗಾವಿಲ್ಲಿ ಡಿ ಪಾರ್ಮಸಿ ಶಿಕ್ಷಣ ಕಲಿಯುತ್ತಾ ಹಣ್ಣು ಮತ್ತು ಕೈಪಲ್ಲೆ ವ್ಯಾಪಾರ ಮಾಡುತ್ತಿದ್ದನು ಎಂದರೆ ಸರಿ. ಸದರಿ ಹಣ್ಣು ಮತ್ತು ಕೈಪಲ್ಲೆ ವ್ಯಾಪಾರ 5 ನೆ ಪ್ರತಿವಾದಿಯ ಸ್ವಂತ ಉದ್ಯೋಗ ಆಗಿತ್ತು ಎಂದರೆ ನಿಜ. 5 ನೇ ಪ್ರತಿವಾದಿ 2003 ರಿಂದ ಆದಾಯ ತೆರಿಗೆ ಪಾವತಿದಾರ ಇರುತ್ತಾನೆ ಎಂದರೆ ನಿಜ. 5 ನೇ ಪ್ರತಿವಾದಿ ಡಾ. ಪ್ರಭಾಕರ ಕೊರೆ ಆಸ್ಪತ್ರೆ ಯಲ್ಲಿ ಮ್ಯಾನೇಜಮೆಂಟ ಆಫ ಕನಸಲ್ಟಂಟ ಅಂತಾ ಕೆಲಸ ಮಾಡುತ್ತಿದ್ದನು ಎಂದರೆ ನಿಜ. ಈ ಎಲ್ಲ ಮೆಲಿನ ಉದ್ಯೊಗಕ್ಕಾಗಿ 5 ನೇ ಪ್ರತಿವಾದಿ ಬೆಳಗಾವಿಯಲ್ಲಿ ವಾಸವಿದ್ದನು ಎಂದರೆ ಸರಿ. 5 ನೇ ಪ್ರತಿವಾದಿ ಮ್ಯಾನೇಜಮೆಂಟ ಆಫ ಕನಸಲಟಂಟ ಉದ್ಯೊಗದಿಂದ 2010 - 11 ರಲ್ಲಿ 5 ನೇ ಪ್ರತಿವಾದಿ ಗೆ ವರ್ಷಕ್ಕೆ ರೂ. 41,73, 615/– ಕನಸಲಟೆಶನ ಶುಲ್ಕ ಪಡೆದಿದ್ದರು ಎಂದರೆ ಸರಿ. 2011–12 ರಲ್ಲಿ ಅವರು ರೂ. 24,55,203/– ಶುಲ್ಕ ಪಡೆದಿರುತ್ತಾರೆ ಎಂದರೆ ಸರಿ. ಸದರಿ ಎಲ್ಲ ಉತ್ಪನ್ನ ಹಣವನ್ನು ಆತನ ಟಿ ಡಿ ಎಸ್ ಕಟ್ಟ ಮಾಡಿ ಕೊಟ್ಟಿರುತ್ತಾರೆ ಎಂದರೆ ನಿಜ. ಸದರಿ 5 ನೇ ಪ್ರತಿವಾದಿಯ ಉದ್ಯೋಗಕ್ಕೆ ನಾನಗಲಿ ಅಥವಾ ನನ್ನ ಅಣ್ಣನಾಗಲಿ ಯಾವುದೇ ಆರ್ಥಿಕ ಸಹಾಯ

O.S. NO. 83/2012
DW - 2 .
Dated 13-07-2026.

ಮಾಡಿರುವುದಿಲ್ಲ ಎಂದರೆ ಸರಿ. 5 ನೇ ಪ್ರತಿವಾದಿ ಈ ಎಲ್ಲ ಮೇಲಿನ ತನ್ನ ಸ್ವಂತ ಆದಾಯದಿಂದ ಬೆಳಗಾವಿಯ ಹಿಂಡಲಗಾ ರಸ್ತೆಯಲ್ಲಿದ್ದ ಸಿಟಿ ಎಸ್ ನಂ. 3964 ರ ಆಸ್ತಿಯನ್ನು ತನ್ನ ಖರೀದಿಸಿರುತ್ತಾನೆ ಎಂದರೆ ಸರಿ. ಅದೇ ರೀತಿ ಆರ್ ಎಸ್ ನಂ. 268/1+2+2ಬಿ ರಲ್ಲಿ ಪ್ಲಾಟ ನಂ. 82 ಮತ್ತು 86 ಖರೀದಿಸಿರುತ್ತಾನೆ ಎಂದರೆ ನಿಜ. ಅದೇ ರೀತಿ ಸಿಟಿ ಎಸಿ ನಂ 4094/1ಎ. 2ಎ /1 ನೇದ್ದರ ಆಸ್ತಿ ಸಹ ತನ್ನ ಸ್ವಂತ ಆದಾಯದಿಂದ ಖರೀದಿ ಮಾಡಿರುತ್ತಾನೆ ಎಂದರೆ ಸರಿ. 5 ನೇ ಪ್ರತಿವಾದಿ ಸದರಿ ಈ ಮೆಲಿನ ಎಲ್ಲ ಆಸ್ತಿಗಳನ್ನು ಖರೀದಿ ಮಾಡಲು ನಾನಾಗಲಿ, ನನ್ನ ಅಣ್ಣ ನಾಗಲಿ ಮತ್ತು ನಮ್ಮ ಏಕತರ ಕುಟುಂಬ ಆದಾಗಯ ಆಗಲಿ ಸಹಾಯ ಮಾಡಿರುವುದಿಲ್ಲ ಎಂದರೆ ನಿಜ. ಈ ಮೆಲಿನ 5 ನೇ ಪ್ರತಿವಾದಿ ಖರೀದಿ ಮಾಡಿದ ಆಸ್ತಿಗಳಲ್ಲಿ ನನ್ನದಾಗಲಿ ಅಥವಾ ನನ್ನ ಅಣ್ಣನದಾಗಲಿ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ. 5 ನೇ ಪ್ರತಿವಾದಿ 2011 ರಲ್ಲಿ ಅನುಬಂದ ಡ ರ ಕ್ರಮಸಂಖ್ಯೆ 2 ನೆ ಹೆಸರಿನಲ್ಲಿ ಔಷದ ವ್ಯಾಪಾರ ಪ್ರಾರಂಬಿಸಿದನು ಎಂದರೆ ಸರಿ. ಸದರಿ ವ್ಯಾಪಾರಕ್ಕೆ ನಾನಗಲಿ ಅಥವಾ ನನ್ನ ಅಣ್ಣನಾಗಲಿ 5 ನೇ ಪ್ರತಿವಾದಿಗೆ ಯಾವುದೇ ಆರ್ಥಿಕ ಸಹಾಯ ಮಾಡಿರುವುದಿಲ್ಲ. ಸದರಿ 5 ನೇ ಪ್ರತಿವಾದಿ ಯ ವ್ಯಾಪಾರಕ್ಕೆ ನಮ್ಮ ಏಕತರ ಕುಟುಂಬಕ್ಕೆ ಯಾವುದೇ ರೀತಿಯ ಸಂಬಂದ ಇರುವುದಿಲ್ಲ ಎಂದರೆ ಸರಿ. ಸದರಿ ಔಷದ ವ್ಯಾಪಾರದಿಂದ ಬಂದ ಉತ್ಪನ್ನದಿಂದ 5 ನೇ ಪ್ರತಿವಾದಿ 9 ಗುಂಟೆ ಜಾಗ ಖರೀದಿಸಿರುತ್ತಾನೆ ಎಂದರೆ ನಿಜ. ಅದೇ ರೀತಿ ದಾವಾ ಅನೂಸೂಚಿ ಕ 8 ನೇ ಆಸ್ತಿಗಳನ್ನು ಖರೀದಿ ಮಾಡಿದನು ಎಂದರೆ ನಿಜ. ಸದರಿ ಆಸ್ತಿಯಲ್ಲಿ ನನ್ನದಾಗಲಿ, ವಾದಿಯರದ್ದಾಲಿ

O.S. NO. 83/2012
DW - 2 .
Dated 13-07-2026.

ಅಥವಾ ಉಳಿದ ಪ್ರವಾದಿಗಳದ್ದಾಗಲಿ ಹಕ್ಕು ಹಿತ ಸಂಬಂದ ಇರುವುದಿಲ್ಲ ಎಂದರೆ ನಿಜ. 5 ನೇ ಪ್ರತಿವಾದಿ ಖರೀದಿ ಮಾಡಿದ ಆಸ್ತಿಗಳಲ್ಲಿ ವಾದಿಯರಾಲಿ ಮತ್ತ ಉಳಿದ ಪ್ರತಿವಾದಿ ಗಳಾಗಲಿ ಯಾವತ್ತು ಕಬ್ಜಾ ವಹಿವಾಗಿದಲ್ಲಿ ಇರುವುದಿಲ್ಲ ಎಂದರೆ ನಿಜ. 5 ನೇ ಪ್ರತಿವಾದಿ ತಾನು ಕಾಯಿದೇ ಬದ್ದ ವಾಗಿ ಖರೀದಿ ಮಾಡಿದ ಆಸ್ತಿಗಳ ಎಲ್ಲ ದಾಖಲಾತಿಗಳ ಕಾಗದ ಪತ್ರಗಳನ್ನು ಪ್ರಸ್ತುತ ದಾವೆಯಲ್ಲಿ ಹಾಜರು ಮಾಡಿರುತ್ತಾನೆ ಎಂದರೆ ಸರಿ. 1996 ರಿಂದ 5 ನೇ ಪ್ರತಿವಾದಿ ಬೈಲಹೊಂಗಲದ ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಿಗೆ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ನಿಜ. 5 ನೇ ನೇ ಪ್ರತಿವಾದಿ ಖರೀದಿ ಮಾಡಿದ ಆಸ್ತಿಗಳಲ್ಲಿ ವಾದಿಯರಿಗಾಗಲಿ ಮತ್ತು ನಾವು ಉಳಿದ ಪ್ರತಿವಾದಿಗಳದ್ದಾಗಲಿ ಯಾವುದೇ ಹಿತ ಸಂಬಂದ ಇರುವುದಿಲ್ಲ ಎಂದರೆ ಸರಿ.

ಪಾಟಿ ಸವಾಲುಃ ವಾದಿಯರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು .

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.